**ಓ.ಎಸ್. ನಂಃ 170/2024**

**ಪಿ.ಡಬ್ಲ್ಯೂಃ 1**

**ದಿನಾಂಕ 25.11.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಕೆ.ಎನ್.ಎಸ್. ವಕೀಲರಿಂದಃ</u>**

1. ಈಗ 5–6 ವರ್ಷಗಳಿಂದ ನನಗೆ ಪ್ರತಿವಾದಿಯ ಪರಿಚಯವಿದೆ. ನಾನು ವೃತ್ತಿಯಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದು, ನನಗೆ ಜಮೀನುಗಳ ಸಹ ಇವೆ. ಪ್ರತಿವಾದಿಯು ತರಕಾರಿ ವ್ಯಾಪಾರ ಮಾಡುತ್ತಾರೆ. ಪ್ರತಿವಾದಿಯು ತನ್ನ ತರಕಾರಿ ವ್ಯಾಪಾರಕ್ಕೆ ಒಂದು ದಿನಕ್ಕೆ 2 ರಿಂದ 3 ಸಾವಿರ ರೂಪಾಯಿ ಮಾತ್ರ ಬಂಡವಾಳ ಹೂಡುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿಯು ತಮ್ಮ ತರಕಾರಿ ವ್ಯಾಪಾರದ ಉದ್ದೇಶಕ್ಕೆ ಕೇವಲ 5 ರಿಂದ 10 ಸಾವಿರ ರೂಪಾಯಿ ಮೊತ್ತದ ಸಾಲವನ್ನು ಮಾತ್ರ ಪಡೆಯುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

2. ಪ್ರತಿವಾದಿಯು ನನ್ನಿಂದ ಸಾಲವನ್ನು ಕೇಳಿದ ಒಂದು ವಾರದ ನಂತರ ನಾನು ಪ್ರತಿವಾದಿಗೆ ಸಾಲವನ್ನು ನೀಡಿರುತ್ತೇನೆ. ಪ್ರತಿವಾದಿಗೆ ನಾನು ಸಾಲವನ್ನು ಮಿರ್ಲೆ ಉಪನೊಂದಣಾಧಿಕಾರಿಗಳ ಕಚೇರಿಯ ಹೊರಗಡೆ ಪತ್ರಬರಹಗಾರರಾದ ರಾಮಣ್ಣರವರ ಸಮಕ್ಷಮದಲ್ಲಿ ಕೊಟ್ಟಿರುತ್ತೇನೆ. ನಿಪಿ.1 ರ ದಾಖಲೆಗೆ ಪಿ.ಡಬ್ಲೂ-2 ರವರಾದ ದನಂಜಯ ಮತ್ತು ಮಧುರವರು ಸಾಕ್ಷಿದಾರರಾಗಿ ತಮ್ಮ ಸಹಿಗಳನ್ನು ಮಾಡಿರುತ್ತಾರೆ.

3. ನಿಪಿ.1 ರ ಛಾಪಾ ಕಾಗದವನ್ನು ಪ್ರತಿವಾದಿಯೇ ತಂದಿರುತ್ತಾರೆ ಹಾಗೂ ನಿಪಿ.1 ರ ಸಾಕ್ಷಿದಾರರನ್ನು ಸಹ ಪ್ರತಿವಾದಿಯೇ ಕರೆದುಕೊಂಡು ಬಂದಿರುತ್ತಾರೆ. ನಿಪಿ.1 ರ ದಾಖಲೆಗೆ ಮೊದಲು ಸಾಕ್ಷಿದಾರರು ತಮ್ಮ ಸಹಿಗಳನ್ನು ಮಾಡಿರುತ್ತಾರೆ. ನಿಪಿ.1 ರ ಸಾಕ್ಷಿದಾರರು ಸಹಿ ಮಾಡುವ ಪೂರ್ವದಲ್ಲಿ ಪ್ರತಿವಾದಿಯು ನಿಪಿ.1 ರ ದಾಖಲೆಗೆ ತಮ್ಮ ಸಹಿಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ರ ದಾಖಲೆಯಲ್ಲಿ ಪ್ರತಿವಾದಿಯು ತಮ್ಮ ಎರಡು ಸಹಿಗಳನ್ನು ಮಾಡಿರುತ್ತಾರೆ. ನಿಪಿ.1 ರ ದಾಖಲೆಯಲ್ಲಿ ನಿಪಿ.1 ರ ಸಾಕ್ಷಿದಾರರ ಸಂಪೂರ್ಣ ಹೆಸರು ಮತ್ತು ವಿಳಾಸವನ್ನು ನಮೂದಿಸಿರುತ್ತಾರೆ.

3. ನಾನು ಸಣ್ಣ ಮೊತ್ತದ 5 ರಿಂದ 10 ಸಾವಿರ ರೂಪಾಯಿಯಷ್ಟು ಸಾಲವನ್ನು ಕೊಟ್ಟು ಖಾಲಿ ಛಾಪಾ ಕಾಗದಗಳಿಗೆ ಸಾಲಗಾರರಿಂದ ಸಹಿಗಳನ್ನು ಪಡೆದುಕೊಳ್ಳುವ ಹವ್ಯಾಸ ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ತಾನು ಮನೆಯನ್ನು ಕಟ್ಟುತ್ತಿದ್ದು, ತನ್ನ ಮನೆಯ ಕೆಲಸಕ್ಕಾಗಿ ಹಣ ಬೇಕಾಗಿರುತ್ತದೆ ಎಂದು ಹೇಳಿ ಪ್ರತಿವಾದಿಯು ನನ್ನಿಂದ ಸಾಲವನ್ನು ಪಡೆದಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಷಯವನ್ನು ಓದಿದ ನಂತರದಲ್ಲಿಯೇ ಅದಕ್ಕೆ ನಾನು ನನ್ನ ಪ್ರಮಾಣ ಪತ್ರಕ್ಕೆ ಸಹಿಯನ್ನು ಮಾಡಿರುತ್ತೇನೆ. ತನ್ನ ತರಕಾರಿ ವ್ಯಾಪಾರಕ್ಕಾಗಿ ಪ್ರತಿವಾದಿಯು ನನ್ನಿಂದ ಸಾಲವನ್ನು ಪಡೆದಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿದ್ದು, ಆದರೆ ತಮ್ಮ ಮನೆ ಕಟ್ಟುವ ಉದ್ದೇಶಕ್ಕಾಗಿ ಪ್ರತಿವಾದಿಯು ನನ್ನಿಂದ ಸಾಲವನ್ನು ಪಡೆದಿರುತ್ತಾರೆ.

4. ಪ್ರತಿವಾದಿಯು ಕೇವಲ ನನ್ನಿಂದ 10,000/- ರೂಪಾಯಿ ಸಾಲವನ್ನು ಪಡೆದಿದ್ದು, ಸದರಿ 10,000/- ರೂಪಾಯಿ ಸಾಲದ ಭದ್ರತೆಗಾಗಿ ನಾನು ಪ್ರತಿವಾದಿಯಿಂದ ಖಾಲಿ ಪ್ರೊನೋಟ್‌ಗೆ ಸಹಿಯನ್ನು ಪಡೆದು ಸದರಿ ದಾಖಲೆಯನ್ನು ದುರುಪಯೋಗಪಡಿಸಿಕೊಂಡು ನಾನು ಪ್ರತಿವಾದಿಯ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ತಾನು ಪಡೆದಿದ್ದ 10,000/- ರೂಪಾಯಿ ಸಾಲವನ್ನು ನನಗೆ ಮರುಪಾವತಿಸಿದ ನಂತರದಲ್ಲಿ ನಾನು ಭದ್ರತೆಗಾಗಿ ಪಡೆದಿದ್ದ ಖಾಲಿ ಪ್ರೊನೋಟ್‌ನ್ನು ವಾಪಸ್ಸು ಕೊಡುವಂತೆ ಕೇಳಿದ್ದರು ಸಹ ನಾನು ಪ್ರತಿವಾದಿಗೆ ಸದರಿ ಪ್ರೊನೋಟ್ ಕೊಡುತ್ತೇನೆ ಎಂದು ಹೇಳಿ ಪ್ರತಿವಾದಿಯ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನಿಂದ ಪಡೆದಿದ್ದ 10,000/- ರೂಪಾಯಿ ಸಾಲವನ್ನು ಈಗಾಗಲೇ ಮರುಪಾವತಿಸಿದ್ದು, ನಾನು ಈ ದಾವೆಯಲ್ಲಿ ಕೇಳಿರುವ ಯಾವುದೇ ಹಣವನ್ನು ಪ್ರತಿವಾದಿಯಿಂದ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**

**ನ್ಯಾಯಾಧೀಶರು, ಕೆ.ಆರ್.ನಗರ.**